

ಪ್ರಬುದ್ಧರು ಮದುವೆ ಬೇಡವೆನ್ನುತ್ತಿದ್ದರೆ ಸಲಿಂಗಕಾಮದ ಸಾಧ್ಯತೆಯನ್ನೂ ಲೆಕ್ಕಕ್ಕೆ ತೆಗೆದುಕೊಳ್ಳಬೇಕಾಗುತ್ತದೆ.

ಡಾ.ವಿನೋದ ಛೆಬ್ಬಿ

# 114: ಸಲಿಂಗಿಯ ದಾಂಪತ್ಯ–2

ತನ್ನಿಷ್ಟಕ್ಕೆ ವಿರುದ್ಧವಾಗಿ ಮದುವೆಯಾಗಿ, ಹೆಂಡತಿಯನ್ನು ಕಾಮಿಸಲಾಗದೆ ಸಂಕಟಕ್ಕೊಳಗಾದ ಸಲಿಂಗಿಯ ಬಗೆಗೆ ಮಾತಾಡುತ್ತಿದ್ದೇವೆ.

ಸಲಿಂಗಿಯು ತನ್ನ ಬಾಲ್ಯದಲ್ಲಿ ಮಧ್ಯವಯಸ್ಕನೊಬ್ಬನಿಂದ ಲೈಂಗಿಕ ದುರ್ಬಳಕೆಗೆ ಒಳಗಾದುದರಿಂದ ಸಲಿಂಗಕಾಮದ 'ದುಶ್ಚಟ' ಅಂಟಿಕೊಂಡಿತು, ಇಲ್ಲದಿದ್ದರೆ ಹೆಚ್ಚಿನವರಂತೆ ತಾನೂ ಹೆರಲಿಂಗಿ **(heterosexual)** ಆಗಿರುತ್ತಿದ್ದೆ ಎಂದು ನಂಬಿದ್ದಾನೆ. ಇದೆಷ್ಟು ನಿಜ?

ನಾನು ಕಂಡ ನೂರಾರು ಸಲಿಂಗಕಾಮಿಗಳಲ್ಲಿ ಹೆಚ್ಚಿನವರಿಗೆ ತಾನು ಸಲಿಂಗಕಾಮಿ ಎಂದು ಅನುಭೂತಿ ಆಗುವುದೇ ಯಾರ ಸಂಗವೂ ಆಗುವ ಮುಂಚೆ. ಉದಾಹರಣೆಗೆ, ಇಪ್ಪತ್ತೈದರ ತರುಣನೊಬ್ಬ ನನ್ನೊಡನೆ ಹಂಚಿಕೊಂಡಿದ್ದು ಹೀಗೆ: 'ನಾನು ಎಂಎ ಓದುತ್ತಿರುವಾಗ ಸಹಪಾಠಿಯೊಡನೆ ಪ್ರತ್ಯೇಕವಾಗಿ ವಾಸಿಸುವ ಪ್ರಸಂಗ ಬಂತು. ಸ್ನೇಹಿತನ ದಷ್ಟಪುಷ್ಟ ಶರೀರವನ್ನು ನೋಡಿ ಅವನೊಡನೆ ಹಸಿಕಾಮವನ್ನು ಅನುಭವಿಸಬೇಕೆನ್ನುವ ಒತ್ತಾಸೆ ಭುಗಿಲೆದ್ದಿತು. ನನ್ನ ಅನಿಸಿಕೆಯ ಬಗೆಗೆ ನನಗೇ ಆಶ್ಚರ್ಯ ಅನ್ನಿಸಿತು. ಯಾಕೆಂದರೆ ಎರಡು ವರ್ಷ ಮುಂಚೆ ಹುಡುಗಿಯೊಬ್ಬಳು ಉತ್ಕಟತೆಯಿಂದ ಅನಿರೀಕ್ಷಿತವಾಗಿ ತಬ್ಬಿಕೊಂಡು ತನ್ನೆದೆಯನ್ನು ನನಗೆ ತಾಗಿಸಿದಾಗ ರೋಚಕ ಅನಿಸಿರಲಿಲ್ಲ. ಓದಿನ ನಂತರವೇ ಕಾಮಜೀವನ ಎಂದುಕೊಂಡಿದ್ದೇನೆ ಎಂದು ಆಕೆಯಿಂದ ಜಾರಿಕೊಂಡಿದ್ದೆ. ಆದರೀಗ ಗೊತ್ತಾಗಿದೆ: ನನಗೆ ಯಾವೊತ್ತೂ ಹುಡುಗಿಯರ ಆಕರ್ಷಣೆ ಇರಲೇ ಇಲ್ಲ, ಹುಡುಗರ ಬಗೆಗಿದೆ ಅಂತ. ಇದನ್ನು ಸ್ನೇಹಿತನ ಜೊತೆಗೆ ಹೇಳಿಕೊಳ್ಳಲು ಸಂಕೋಚ ಅಡ್ಡಿಯಾಯಿತು. ನಂತರ ಅವನನ್ನೇ ಕದ್ದು ನೋಡುತ್ತ ಏಕಾಂತದಲ್ಲಿ ಸುಖಿಸಲು ಆರಂಭಿಸಿದೆ.' ಈ ತರುಣನು ಮುಂಚೆ ಗಂಡಿನ ಸಂಪರ್ಕ ಹೊಂದಿಲ್ಲವಾದರೂ ಸಲಿಂಗಕಾಮಿಯಾಗಿರುವುದು ಸ್ಪಷ್ಟವಾಗಿದೆ.

ಸಲಿಂಗೀಯತೆ, ಹೆರಲಿಂಗೀಯತೆ, ದ್ವಿಲಿಂಗೀಯತೆ, ಲಿಂಗಾಂತರೀಯತೆ **(transsexuality:** ಒಂದು ಲಿಂಗದವರಾಗಿ ಹುಟ್ಟಿ ಇನ್ನೊಂದು ಲಿಂಗದವರಾಗುವ ಅದಮ್ಯ ಬಯಕೆ) ಇವೆಲ್ಲವೂ ಹುಟ್ಟುಪ್ರವೃತ್ತಿಗಳು. ಅಂತರಾಳದಲ್ಲಿಯ ಮನೋವ್ಯಾಪಾರದಿಂದ ಹೀಗಾಗುತ್ತದೆಯೇ ವಿನಾ ಇನ್ನೊಬ್ಬರ ಪ್ರಚೋದನೆಯಲ್ಲ. ಅವರ ನಡವಳಿಕೆಯು ಇನ್ನೊಬ್ಬರಿಂದ ಪರಿಸರದಿಂದ, ಹಾರ್ಮೋನುಗಳಿಂದ ಪ್ರಭಾವಿತವಾಗಬಹುದಷ್ಟೆ. ಸಲಿಂಗಕಾಮಿಗಳ ನಡುವೆ ಇದ್ದರೆ ಅದಕ್ಕೇ ಸೆಳೆತ ಹುಟ್ಟುತ್ತದೆ ಎನ್ನುವುದೂ ತರ್ಕಹೀನ – ಒಂದುವೇಳೆ ಇದು ನಿಜವಾದರೆ ಸಮಾಜದ ಬಹುಸಂಖ್ಯಾತರು ಹೆರಲಿಂಗಿಗಳೇ ಆಗಿರುವುದರಿಂದ ಸಲಿಂಗಕಾಮವು ಅಸ್ತಿತ್ವದಲ್ಲೇ ಇರುತ್ತಿರಲಿಲ್ಲ! ನನಗೆ ಗೊತ್ತಿರುವ ಸಾಫ್ಟ್‌ವೇರ್ ತರುಣನೊಬ್ಬ ಜರ್ಮನಿಯ ಕೊಲೋನ್ ನಗರಕ್ಕೆ ಕೆಲಸಕ್ಕೆಂದು ಹೋಗಿದ್ದ. ಅಲ್ಲಿ ಸಲಿಂಗಿ ಗಂಡಸರು ತುಟಿಗೆ ಬಣ್ಣ, ಸ್ಕರ್ಟ್ ಧರಿಸಿದ ತಮ್ಮ ಸಂಗಾತಿ ಗಂಡುಗಳನ್ನು ನಡುಬೀದಿಯಲ್ಲಿ ಮುತ್ತಿಡುವುದನ್ನು ಕಂಡು (ಹುಡುಗಿಯೊಬ್ಬಳನ್ನು ಕಾಮಿಸುತ್ತಿದ್ದ ಅವನು) ಹುಚ್ಚುಹಿಡಿದಂತಾಗಿ ಓಡಿಬಂದ. ಆ ದುಃಸ್ವಪ್ನದಿಂದ ಅವನನ್ನು ಹೊರತರುವುದೇ ಒಂದು ದೊಡ್ಡ ಕೆಲಸವಾಯಿತು.

ಇದನ್ನೆಲ್ಲ ಹೇಳಿ ಸಲಿಂಗಿಯನ್ನು ಮನಗಾಣಿಸಲು ಪ್ರಯತ್ನಪಟ್ಟೆ. ಒಟ್ಟಿನಲ್ಲಿ, ಸಲಿಂಗೀಭಾವದ ಬೀಜವನ್ನು ನಿನ್ನಲ್ಲಿ ಯಾರೂ ಬಿತ್ತಿಲ್ಲ. ಅದನ್ನು ಆಯ್ಕೆ ಮಾಡಿಕೊಂಡಿದ್ದು ನೀನೇ ಎಂದೆ. ಆತ ಒಪ್ಪಿಕೊಂಡರೂ ಅವನಿಗೆ ಸಮಾಧಾನವೇನೂ ಆಗಲಿಲ್ಲ. ಯಾಕಾಗಲಿಲ್ಲ ಎನ್ನುವುದನ್ನು ಥಟ್ಟನೆ ಊಹಿಸಿದೆ. ತಾನು ಸಲಿಂಗಕಾಮಿಯೆಂದು ಸ್ಪಷ್ಟವಾದ ನಂತರ ಮೂಡುವ ಭಾವವು ನಿರಾಳತೆಯ ಒಪ್ಪಿಗೆಯೋ ಅಥವಾ ಸಲ್ಲದ ಸಂಕಟವೋ ಎನ್ನುವುದು ಅವರವರು ಬೆಳೆದುಬಂದ ಪರಿಸರ, ಹಾಗೂ ಅವರ ಈ ನಿಲುವನ್ನು ಇತರರು ಒಪ್ಪುವ ಅಥವಾ ಒಪ್ಪದಿರುವ ಧೋರಣೆಯನ್ನು ಅವಲಂಬಿಸಿರುತ್ತದೆ. ಇವನ ಪರಿಸರವು ಎಷ್ಟೊಂದು ಕಟ್ಟಾ ಸಂಪ್ರದಾಯದ್ದು ಎಂದುಕೊಂಡಿದ್ದಾನೆ ಎಂದರೆ, ತಾನು ಇತರರಿಗಿಂತ ಭಿನ್ನ ಎಂದು ಸ್ವಲ್ಪ ಸುಳಿವು ಕೊಟ್ಟರೂ ಸಾಕು, ಅನಾಹುತ ಕಾದಿದೆ ಎಂದುಕೊಂಡು ಆತಂಕಪಡುತ್ತಿದ್ದಾನೆ. ಅದನ್ನವನು ಭಾವನೆಯ ಮೂಲಕ ತೋರಿಸದೆ ಕ್ರಿಯಾಶೀಲ ಪದಗಳಲ್ಲಿ ಹೊರತಂದ: 'ಅದೇನೋ ಸರಿ, ಆದರೆ ನಾನೀಗ ಹೆಂಡತಿಗೆ ಸುಖ ಕೊಡಬೇಕಲ್ಲ, ಹಾಗಾಗುವಂತೆ ನನ್ನನ್ನು ತಯಾರುಮಾಡಿ.' ತನ್ನ ಅನಿಸಿಕೆಗಳನ್ನು ಇನ್ನೊಬ್ಬರಿಗೋಸ್ಕರ ಕೊಂದುಕೊಳ್ಳುತ್ತಿದ್ದಾನೆ!

ನಾನು ನೋಡಿರುವ ಸ್ತ್ರೀ ಸಲಿಂಗಕಾಮಿಗಳ **(lesbian)** ಪೈಕಿ ಒಬ್ಬಳ ನೆನಪಂತೂ ಇನ್ನೂ ಮನಸ್ಸಿಗೆ ಹಸಿಯಾಗಿ ಕಾಡುತ್ತದೆ. ನನ್ನೊಡನೆ ಹಲವು ಸುತ್ತು ಆಪ್ತಸಲಹೆಯ ನಂತರ ಆಕೆ ತುಂಬು ಆತ್ಮವಿಶ್ವಾಸ ತಳೆದಳು. ತನ್ನನ್ನು ಮೆಚ್ಚಿದ ತರುಣಿಯೊಡನೆ ಬದ್ಧಬದುಕು ಕಟ್ಟಿಕೊಳ್ಳುವ ಮಟ್ಟಿಗೆ ತಯಾರಾದಳು. ದುರಂತವೆಂದರೆ, ಅವಳಪ್ಪ ಅವಳ ಸ್ಥಿತಿಯನ್ನು ಒಪ್ಪಿಕೊಳ್ಳದೆ ಖಿನ್ನತೆಗೆ ಒಳಗಾಗಿ ಕೂಳುನೀರು ಬಿಟ್ಟು ಹಾಸಿಗೆ ಹಿಡಿದ. ಅವನನ್ನು ನನ್ನಲ್ಲಿ ಕರೆತಂದಳು. ಆಕೆ ಬದಲಾಗಲು ಸಾಧ್ಯವಿಲ್ಲ ಎಂದು ತಿಳಿಸಿಹೇಳಿದಾಗ ಆತ ಬಿಕ್ಕಿಬಿಕ್ಕಿ ಅಳುತ್ತ ಮಗಳ ಕಾಲು ಹಿಡಿದು, ಬೇಟಿ ಮೇರೀ ಬಾತ್ ಮಾನ್ ಲೋ ಎಂದ. ಕೊನೆಗೂ ಅವಳು ಹತಾಶೆಯಿಂದ ಮದುವೆಯ ಬಲಿಪೀಠ ಏರಲು ಸಿದ್ಧವಾದಳು. ಮುಂದೆ ಅವಳು ಮದುವೆಯಾಗಿ ಇನ್ನೊಂದು ದೊಡ್ಡ ದುರಂತ ಎದುರಿಸಿದಳೋ, ಸಾವಿಗೆ ಶರಣಾದಳೋ, ಅಥವಾ ಮದುವೆಯಾಗದೆ ಅಪ್ಪನನ್ನು ಕಳೆದುಕೊಂಡಳೋ ಗೊತ್ತಾಗಲಿಲ್ಲ. ಅವಳ ಬದುಕಂತೂ ಮಾರ್ಯಾದೆಯ ಹತ್ಯೆಗೀಡಾಯಿತು.

ನನ್ನ ನೆನಪನ್ನು ಪಕ್ಕಕ್ಕಿಟ್ಟು ಅವನನ್ನು ನೇರವಾಗಿ ಕೆಣಕಿದೆ. 'ಹೆಂಡತಿಯೊಡನೆ ಸಂಭೋಗ ಮಾಡಬೇಕು ತಾನೆ? ಅವಳೊಡನೆ ಈಮುಂಚೆ ಎರಡು ಸಲ ಸಂಭೋಗ ಮಾಡಿದ್ದೀರಿ ಎಂದಿರಲ್ಲ, ಅದು ಹೇಗೆ ಮಾಡಿದಿರೋ ಅದನ್ನೇ ಈಗಲೂ ಅನುಸರಿಸಿ. ನನ್ನನ್ನು ಕೇಳುವುದು ಏನಿದೆ?' ಎಂದು ಮೃದುವಾಗಿ ಸವಾಲು ಹಾಕಿದೆ.

ಅವನು ಮತ್ತೆ ಗೊಂದಲಕ್ಕೆ ಒಳಗಾದ. ಮುಂಚೆ ವಯಾಗ್ರಾ ತೆಗೆದುಕೊಂಡಿದ್ದೆ, ಮತ್ತೆ ಅದನ್ನು ಸೇವಿಸಿ ಯತ್ನಿಸಿದರೂ ಸಾಧ್ಯವಾಗುತ್ತಿಲ್ಲ ಎಂದ. ಕೆದಕಿದಾಗ ಅರ್ಥಮಾಡಿಕೊಂಡ. ಮುಂಚೆ ಕೂಡಲು ಸಾಧ್ಯವಾಗಿದ್ದು ಮಧ್ಯವಯಸ್ಕ ಸಂಗಾತಿಯನ್ನು ಕಲ್ಪಿಸಿಕೊಂಡಿದ್ದರಿಂದ ಮಾತ್ರ, ಈಗ ಹೆಂಡತಿಯೊಡನೆ ಆ ಕಲ್ಪನೆಯನ್ನು ತಂದುಕೊಳ್ಳಲು ಆಗುತ್ತಿಲ್ಲ ಎಂದು ಅರಿವಾಗಿ ಪೆಚ್ಚುಮೋರೆ ಮಾಡಿದ. ಅವನೊಬ್ಬನೇ ಇರುವಾಗ ಹಸ್ತಮೈಥುನ ಮಾಡಿಕೊಂಡು ಸುಖಿಸುತ್ತಾನಲ್ಲ, ಆಗ ಸಲಿಂಗಿಯ ಕಲ್ಪನೆ ನಿಚ್ಚಳವಾಗಿ ಬರುತ್ತಿದೆಯೆ ಎಂದುದಕ್ಕೆ ಹೌದೆಂದು ಖುಷಿಯಿಂದ ತಲೆದೂಗಿದ.

ಇದರರ್ಥ ಏನು? ಒಂದುಕಡೆ ಸಲಿಂಗಕಾಮದಲ್ಲಿ ತೃಪ್ತಿ ಕಾಣುತ್ತಿದ್ದಾನೆ. ಅದರೊಂದಿಗೆ, 'ತಾನು ಹೀಗೆಯೇ' ಎಂದು ಗುರುತಿಸಿಕೊಂಡು, ತನ್ನ ವ್ಯಕ್ತಿತ್ವದಲ್ಲಿ ಅಳವಡಿಸಿಕೊಂಡಿದ್ದಾನೆ. ಯಾವ ಕಾರಣಕ್ಕೂ ಅದರಿಂದ ದೂರವಾಗುವುದನ್ನು ಕಲ್ಪಿಸಿಕೊಳ್ಳಲಾರ. ಇನ್ನೊಂದು ಕಡೆ ಅದನ್ನು ಕಿತ್ತುಹಾಕಿ ಅದರ ಜಾಗದಲ್ಲಿ ಹೆರಲಿಂಗಕಾಮವನ್ನು ಪ್ರತಿಷ್ಠಾಪಿಸುವಂತೆ ನನ್ನನ್ನು ಒತ್ತಾಯಿಸುತ್ತಿದ್ದಾನೆ. ಪ್ರಿಯವಾದ ವ್ಯಕ್ತಿತ್ವದ ಭಾಗವನ್ನು ಕತ್ತರಿಸಿಹಾಕಿ, ಬೇಡವಾದ ಭಾಗವನ್ನು ಅವನ ಮನಸ್ಸಿನೊಳಗೆ – ಹಾಗೂ ಮನಸ್ಸಿಗೆ ವಿರುದ್ಧವಾಗಿ – ತುರುಕಿಸಿಕೊಳ್ಳುವುದು ಅವನ ಬಯಕೆ! ಅವನ ಬಯಕೆಗೇ ವಿರುದ್ಧವಾದ ಬಯಕೆ!

ಅವನ ದ್ವಂದ್ವಭಾವವನ್ನು ಹೇಗೆ ನಿರ್ವಹಿಸಿದೆ ಎಂದು ಮುಂದಿನ ವಾರ ಹೇಳುತ್ತೇನೆ.

ಉಚಿತ ಸಹಾಯವಾಣಿಗೆ ಮಂಗಳವಾರ ಹಾಗೂ ಶುಕ್ರವಾರ ಕರೆಮಾಡಿ. ಲೈಂಗಿಕ ಸಮಸ್ಯೆಗಳಿಗೆ: **8050255229** (3ರಿಂದ 5ರ ತನಕ); ದಾಂಪತ್ಯ ಸಮಸ್ಯೆಗಳಿಗೆ: **8494944888** (11ರಿಂದ ಸಂಜೆ 5ರ ತನಕ). ದಾಂಪತ್ಯ ಸಮಸ್ಯೆಗಳ ಪರಿಹಾರಕ್ಕೆ 'ಸುಧಾ'ಕ್ಕೆ ಪತ್ರ ಬರೆಯಬಹುದು.